ಆ) ರಾಜ್ಯ ಸರ್ಕಾರದ ವತಿಯಿಂದ ಎಷ್ಟು ಪಾಲಿಟೆಕ್ನಿಕ್‌ಗಳ ಕಾಲೇಜುಗಳನ್ನು ಮಂಜೂರು ಮಾಡಲಾಗುವುದು;

ಇ) ಚಿಕ್ಕಮಗಳೂರು ಜಿಲ್ಲೆಯ ಯಾವ ಯಾವ ತಾಲ್ಲೂಕಿಗೆ ಪಾಲಿಟೆಕ್ನಿಕ್ ಮಂಜೂರಾತಿಯಾಗಲಿದೆ;

ಈ) ಕಡೂರು ಪಟ್ಟಣಕ್ಕೆ ಪಾಲಿಟೆಕ್ನಿಕ್ ಕಾಲೇಜು ಪ್ರಸಕ್ತ ಸಾಲಿನಲ್ಲಿ ಮಂಜೂರು ಮಾಡಲಾಗುವುದೇ?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) 2009–10ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಯಾವುದೇ ಪಾಲಿಟೆಕ್ನಿಕ್‌ಗಳ ಆರಂಭಕ್ಕೆ ಇನ್ನೂ ಮಂಜೂರಾತಿ ದೊರೆತಿರುವುದಿಲ್ಲ.

ಆ) 2009–10ನೇ ಸಾಲಿಗೆ ರಾಜ್ಯ ಸರ್ಕಾರದ ವತಿಯಿಂದ ಒಟ್ಟು 23 ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಕ್ರಮ ಜರುಗಿಸಲಾಗುತ್ತಿದೆ.

ಇ) ರಾಜ್ಯ ಸರ್ಕಾರದಿಂದ ಮಂಜೂರಾತಿ ಆಗಿರುವುದಿಲ್ಲ.

ಈ) ಪ್ರಸ್ತಾವನೆ ಇರುವುದಿಲ್ಲ.

ಮುಜರಾಯಿ ದೇವಸ್ಥಾನಗಳಿಗೆ ಹಣ ಬಿಡುಗಡೆ

734 ಶ್ರೀ ಖಾದರ್ ಯು.ಟಿ. : ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09ನೇ ಸಾಲಿನಲ್ಲಿ (ಜೂನ್ 2009 ರವರೆಗೆ) ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳಿಗೆ ನೀಡಿರುವ ಅನುದಾನ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಮಂಗಳೂರು ವಿಧಾನ ಸಭಾ ಕ್ಷೇತ್ರದಲ್ಲಿ ಬರುವ ಎಷ್ಟು ಮುಜರಾಯಿ ದೇವಸ್ಥಾನಗಳಿಗೆ ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮುಜರಾಯಿ ಸಚಿವರು) :

ಅ) ರೂ. 2217.26 ಲಕ್ಷಗಳು,

ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ಲಗತ್ತಿಸಿದೆ.

ಆ) ಮಂಗಳೂರು ವಿಧಾನಸಭಾ ಕ್ಷೇತ್ರದಲ್ಲಿನ ಒಟ್ಟು 7 ಮುಜರಾಯಿ ದೇವಸ್ಥಾನಗಳಿಗೆ ರೂ.4.00 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

2008–09ನೇ ಸಾಲಿನಲ್ಲಿ (ಜೂನ್ 2009 ರವರೆಗೆ) ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳಿಗೆ ಜಿಲ್ಲಾವಾರು ಮಂಜೂರು ಮಾಡಿರುವ ಅನುದಾನದ ವಿವರ.

ಅನುಬಂಧ

ಕ್ರ ಸಂ.	ಜಿಲ್ಲೆ	ಸಂಸ್ಥೆಗಳ ಸಂಖ್ಯೆ	ಮೊತ್ತ (ರೂ.ಲಕ್ಷಗಳಲ್ಲಿ)
1	ಬೆಂಗಳೂರು ನಗರ	58	82.21
2	ಬೆಂಗಳೂರು ಗ್ರಾಮಾಂತರ	114	50.00
3	ಬಾಗಲಕೋಟೆ	58	41.00
4	ಬೆಳಗಾವಿ	159	246.50
5	ಬಳ್ಳಾರಿ	42	36.50
6	ಬೀದರ್	43	42.00
7	ಬಿಜಾಪುರ	65	49.00
8	ಚಾಮರಾಜನಗರ	22	19.00
9	ಚಿಕ್ಕಮಗಳೂರು	47	117.00
10	ಚಿತ್ರದುರ್ಗ	61	48.50
11	ದಾವಣಗೆರೆ	73	57.00
12	ದಕ್ಷಿಣ ಕನ್ನಡ	70	55.50
13	ಧಾರವಾಡ	37	31.50
14	ಗದಗ	41	30.50
15	ಗುಲ್ಬರ್ಗಾ	181	102.00
16	ಹಾಸನ	42	90.00
17	ತುಮಕೂರು	299	156.80
18	ಹಾವೇರಿ	61	40.50
19	ಕೊಡಗು	26	17.00
20	ಕೋಲಾರ	117	144.00
21	ಕೊಪ್ಪಳ	31	17.00
22	ಮಂಡ್ಯ	119	172.25
23	ಮೈಸೂರು	92	80.50
24	ರಾಯಚೂರು	43	218.00

25	ಶಿವಮೊಗ್ಗ	44	65.00
26	ಉಡುಪಿ	27	55.00
27	ಉತ್ತರ ಕನ್ನಡ	137	57.00
28	ಚಿಕ್ಕಬಳ್ಳಾಪುರ	65	65.00
29	ರಾಮನಗರ	35	31.00
	ಒಟ್ಟು	**2209**	**2217.26**

ಮುಜರಾಯಿ ಇಲಾಖೆಗೆ ಸೇರಿದ ಆರ್.ಆರ್. ಛತ್ರವನ್ನು ಖಾಸಗಿಯವರಿಗೆ ಹಸ್ತಾಂತರಿಸುವುದು

1145 ಶ್ರೀ ನರೇಂದ್ರಬಾಬು ನೆ.ಲ.: ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಪಂಪ ಮಹಾಕವಿ ರಸ್ತೆಯಲ್ಲಿರುವ ಮುಜರಾಯಿ ಇಲಾಖೆಗೆ ಸೇರಿದ ಆರ್.ಆರ್.ಛತ್ರವನ್ನು ಖಾಸಗಿಯವರಿಗೆ ಹಸ್ತಾಂತರಿಸಲು ಕೆಲವು ಪಟ್ಟಭದ್ರ ಹಿತಾಶಕ್ತಿಗಳು ಪ್ರಯತ್ನ ನಡೆಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ವಿಸ್ತಾರವಾದ ಜಾಗವುಳ್ಳ ಈ ಛತ್ರವನ್ನು ನವೀಕರಿಸಿ ಆದಾಯವನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಆ) ಹಾಗಿದ್ದಲ್ಲಿ, ಖಾಸಗಿ ವ್ಯಕ್ತಿಗಳಿಗೆ ಇಂತಹ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸರ್ಕಾರದ ಆಸ್ತಿಯನ್ನು ಹಸ್ತಾಂತರಿಸಲು ಪ್ರಯತ್ನಿಸುತ್ತಿರುವುದನ್ನು ಕೂಡಲೇ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮುಜರಾಯಿ ಸಚಿವರು) :

ಅ) ಹೌದು, ಸರ್ಕಾರದ ಗಮನಕ್ಕೆ ಬಂದಿದೆ.

ರಾಯ ರಾಯ ಛತ್ರ ಮತ್ತು ಛತ್ರಕ್ಕೆ ಸೇರಿದ ಆಸ್ತಿಯು ಮುಜರಾಯಿ ಇಲಾಖೆಯ ವಶದಲ್ಲಿರುತ್ತದೆ. ಸದರಿ ಸ್ವತ್ತಿನ ಹಕ್ಕುದಾರಿಕೆ ಬಗ್ಗೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ದಾವೆ ವಿಚಾರಣೆಗೆ ಬಾಕಿ ಇದೆ.

ಛತ್ರವನ್ನು ನವೀಕರಿಸಿ, ಆದಾಯವನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದು.

ಆ) ಖಾಸಗಿ ವ್ಯಕ್ತಿಗಳಿಗೆ ಹಸ್ತಾಂತರಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.